# ಇಂಟರ್‌ನೆಟ್ ಮತ್ತು ಸರ್ಚ್ ಚಟುವಟಿಕೆಯ ವಿಷಯ.

ನಾವು ಮೊದಲಿಗೆ ಸ್ಟಾರ್ಟ್ ಬಟನ್ ಒತ್ತಿ ಗೂಗಲ್ ಕ್ರೋಂ ಡಬಲ್ ಪ್ರೆಸ್ ಮಾಡಬೇಕು. ನಂತರ ಕ್ರೋಂ ಓಪನ್ ಆಗುತ್ತದೆ. ಅಮೇಲೆ ನಾವು ನಮ್ಮ ಮೊಬೈಲ್ ಸಹಾಯದಿಂದ ಮೊಬೈಲ್ ಡೇಟಾ ಮತ್ತು ವೈಫೈ ಆನ್ ಮಾಡಿಕೊಂಡು ಇಂಟರ್‌ನೆಟ್ ಕನೆಕ್ಷನ್ ತೆಗೆದುಕೊಳ್ಳಬೇಕು. ನಂತರ ನಾವು ಗೂಗಲ್ ಕ್ರೋಂನಲ್ಲಿ ಎರಡು ರೀತಿಯ ಬಾರ್ ಅನ್ನು ನೋಡಬಹುದು. ಅದರಲ್ಲಿ ಒಂದು ಬ್ರೌಸಿಂಗ್ ಸೆಂಟರ್, ಇನ್ನೊಂದು ಸರ್ಚಿಂಗ್ ಬಾರ್ ಅನ್ನು ನೋಡಬಹುದು. ಇದರಲ್ಲಿ ಎರಡು ವ್ಯತ್ಯಾಸವಿದೆ. ನಮಗೆ ಏನಾದರೂ ಸಂಪೂರ್ಣವಾಗಿ ಯಾವುದಾದರೂ ವೆಬ್ ಸೈಟ್ ವಿಳಾಸ, ಮತ್ತೆ ಇನ್ನಿತರ ವಿಳಾಸಗಳು ನಮಗೆ ಸಂಪೂರ್ಣವಾಗಿ ತಿಳಿದಿದ್ದಲ್ಲಿ ನಾವು ಅದನ್ನು ಬ್ರೌಸಿಂಗ್ ಸೆಂಟರ್‌ನಲ್ಲಿ ಹುಡುಕಬಹುದು. ಇಲ್ಲವಾದಲ್ಲಿ ಸರ್ಚಿಂಗ್ ಬಾರ್‌ನಲ್ಲಿ ಹುಡುಕಬಹುದು. ಉದಾಹರಣೆಗೆ, ಪ್ರಜಾವಾಣಿ ಪೇಪರ್ ವಿಳಾಸ, ವಿದೇಶದಲ್ಲಿ ಇರುವಂತಹ ಡೆಕ್ಕನ್ ಹೆರಾಲ್ಡ್ ಪೇಪರ್ ವಿಳಾಸ, ನಮ್ಮ ಪುಸ್ತಕಗಳನ್ನು ಬರೆದಿರುವ ಕವಿಗಳ ವಿಳಾಸಗಳನ್ನೂ ಕೂಡ ಅವರು ಬರೆದಿರುವ ಮಾಹಿತಿಗಳನ್ನು ನಾವು ಇಂಟರ್‌ನೆಟ್ ಮೂಲಕ ಕುಳಿತಲ್ಲಿಯೇ ಹಲವಾರು ದೇಶಗಳನ್ನೂ , ಯೂನಿವರ್ಸಿಟಿಗಳನ್ನೂ, ನಮಗೆ ಬೇಕಾದ ವಸ್ತುಗಳನ್ನೂ ಕೂಡ ನಾವು ಇಂಟರ್‌ನೆಟ್ ಮುಖಾಂತರ ನೋಡಬಹುದು. ಹಾಗೆಯೇ ಮನೆಗೆ ಬೇಕಾಗಿರುವ ಸಾಮಾನುಗಳನ್ನು ನಾವು ಅಮೆಝಾನ್ ಮುಖಾಂತರ ಕುಳಿತಲ್ಲಿಯೇ ಇಂಟರ್‌ನೆಟ್ ಬಳಸಿಕೊಂಡು ಇನ್ನಿತರ ಉಡುಪುಗಳು, ಮೊಬೈಲ್, ಟಿ.ವಿ. ಲ್ಯಾಪ್‌ಟಾಪ್, ಪುಸ್ತಕಗಳು, ಕ್ಯಾಮೆರಾ, ಮುಂತಾದ ವಸ್ತುಗಳನ್ನು ನಾವು ತೆಗೆದುಕೊಳ್ಳಬಹುದು. ಮುಂದಿನ ಚಟುವಟಿಕೆಗಾಗಿ ನಾವು ಕಳುಹಿಸಿರುವ ವಿಡಿಯೋವನ್ನು ನೋಡಿ ಕಲಿಯಿರಿ.